Sri G. B. SHANKAR RAO.—These dispensaries are sanctioned on the basis of cattle population.

Sri B. P. GANGADHAR.—Supplementary to (*b*): Have you got the number of cattle heads in Madhugiri taluk to come to the conclusion that there is no necessity for starting a hospital there or is it that the Government do not want to start a hospital there?

ಶ್ರೀ ಜಿ. ಬಿ. ಶಂಕರರಾವ್.—ನಮ್ಮ ಪ್ರೋಗ್ರಾಂ ಪ್ರಕಾರ 15 ಸಾವಿರ ಕ್ಯಾಟಲ್ ಇದ್ದರೆ ಒಂದು ಪಶುವೈದ್ಯಶಾಲೆ ಕೊಡಬೇಕೆಂದಿದೆ. ಮಧುಗಿರಿ ತಾಲ್ಲೂಕಲ್ಲಿ ಸುಮಾರು 76 ಸಾವಿರ ಜಾನುವಾರಿದೆ. ಈಗಾಗಲೇ ಒಂದು ಆಸ್ಪತ್ರೆ ೨ ತಾಲ್ಲೂಕಿನಲ್ಲಿದೆ, ಮತ್ತು 4 ಆರ್.ಡಿ. ಇವೆ. ದನಗಳ ಸಂಖ್ಯೆ ಹೆಚ್ಚಿದರೆ ಮತ್ತೊಂದು ಕೊಡಬೇಕಾಗುವುದು.

Opening of New High Schools

293. Sri P. B. NANDIHALI (Belgaum).—

Will the Minister for Education be pleased to state :—

(*a*) whether the following conditions are compulsory to open new high schools in Mysore State;

(i) the Management has to deposit Rs. 5,000 to start VIII Standard;

(ii) no maintenance grants for the first three years will be given;

(*b*) whether there is any proposals to consider and withdraw the above conditions as it is very difficult for new and poor institutions to satisfy the conditions;

(*c*) if not, why?

Sri K. V. SHANKARA GOWDA (Minister for Education).—

(*a*) Yes. But Girls High Schools are given aid from the first year.

(*b*) No. The Managements of Aided Schools can deposit the stability fund in five equal instalments commencing from the date of starting the school.

(*c*) There are sufficient number of High Schools in the State and many of them have poor strength. Government's finances do not permit the starting of more aided schools. Schools are permitted without aid if any management is keen on starting a school though Government feels that the school is not essential. Stability fund is essential as Government aid may be stopped if the management contravenes any rule.

In such circumstances enough funds must be available to run the school for 3 months at least. Even for unaided schools such fund is essential to pay the staff if popular contribution is not forthcoming or Management fails to pay the staff regularly.

Sri P. B. NANDIHALI.—As you are giving grant-in-aid to girls' high schools from the first year of their start, is it not a great necessity to give the same grant-in-aid to high schools in the backward and rural areas also ?

† Sri K. V. SHANKARA GOWDA.—No.

Sri P. B. NANDIHALI.—Is it not a discrimination ?

Sri K. V. SHANKARA GOWDA.—There are already sufficient number of high schools and so, if anybody wants to start fresh high schools, it is on the condition that no grant-in-aid will be given for 3 years.

Sri P. B. NANDIHALI.—On what basis does the Hon'ble Minister say that there are sufficient number of high schools in the State ?

Sri K. V. SHANKARA GOWDA.—On the basis of population.

Sri B. P. KADAM.—Does not Government feel it necessary to give a sympathetic consideration for these villages with thin population especially in the malnad tracts of the State ?

Sri K. V. SHANKARA GOWDA.—We are giving proper consideration for the malnad tracts.

ಶ್ರೀ ಎ. ಆರ್. ಪಂಚಗಾವಿ.—ಹೊಸದಾಗಿ ಹೈಸ್ಕೂಲುಗಳನ್ನು ಪ್ರಾರಂಭಿಸಬೇಕಾದರೆ 5 ಸಾವಿರ ರೂಪಾಯಿ ಡಿಪಾಜಿಟ್ ಇಡಬೇಕು. ಆದರೆ ಕೆಲವು ಬ್ಯಾಂಕುಗಳಲ್ಲಿ ಡಿಪಾಜಿಟ್ ಇಡಲು ಹೋದರೆ ಪಾಯಿಂಟ್ ನೇಮ್ಸ್‌ನಲ್ಲಡಬೇಕು, ಇಲ್ಲದಿದ್ದರೆ ಅವರು ಇಟ್ಟುಕೊಳ್ಳುವುದಿಲ್ಲ. ಇದರಿಂದ ತೊಂದರೆಯಾಗಿದೆ. ಮುಂದೆ ಒಬ್ಬರ ಹೆಸರಿನಲ್ಲೇ ಇಡಲು ಅವಕಾಶ ಇತ್ತು. ಅದೇ ರೀತಿ ಅವಕಾಶ ಕೊಡಲು ಸಾಧ್ಯವಿಲ್ಲವೆ ?

ಶ್ರೀ ಕೆ. ವಿ. ಶಂಕರಗೌಡ.—ಈಗ ರೂಲ್ಸ್ ಪ್ರಕಾರ ಪಾಯಿಂಟ್ ನೇಮ್ಸ್‌ನಲ್ಲೇ ಇಡಬೇಕು.

Sri H. SIDDAVEERAPPA.—Have the Government revised the rule to the effect that in the case of a new high school the Government will not give grant for 5 years instead of 3 years ?

Sri K. V. SHANKARA GOWDA.—No. The period is 3 years.

ಶ್ರೀ ಎಚ್. ಬಿ. ಜ್ವಾಲನಯ್ಯ.—5 ಸಾವಿರ ರೂಪಾಯಿ ಡಿಪಾಜಿಟ್ ಇಡಬೇಕು ಎಂದಿರುವುದು ಮತ್ತು 3 ವರ್ಷದ ಕಂಡೀಷನ್ ಹಾಕಿರುವುದು ತೊಂದರೆಯಾಗಿದೆ. ಆದುದರಿಂದ ಯಾವುದಾದರೂ ಒಂದು ಕಂಡೀಷನ್ ಹಾಕಿದರೆ ಅನುಕೂಲವಾಗುವುದರಿಂದ ಹಾಗೆ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಈಗಾಗಲೆ ಸಾಕಷ್ಟು ಹೈಸ್ಕೂಲುಗಳಿರುವುದರಿಂದ ಹೊಸದಾಗಿ ಪ್ರಾರಂಭಿಸಲು ಅವಕಾಶ ಕೊಡುವುದಕ್ಕಾಗುವುದಿಲ್ಲ.

There are a number of High schools with a strength of only 60.

ಶ್ರೀ ಎಂ. ನಾಗಪ್ಪ.—ತಾವು ಈಗ ಜನಸಂಖ್ಯೆ ಆಧಾರದ ಮೇರೆ ಹೈಸ್ಕೂಲುಗಳನ್ನು ನಿರ್ಮಾಣ ಮಾಡುತ್ತೇವೆ ಎಂದು ಹೇಳಿದಿರಿ. ಜನಸಂಖ್ಯೆ ಬೇಸಿಸ್ ಮೇರೆ ರಾಯಚೂರು ಸ್ಪೇಷಗೆ ಮೂರನೆಯದಾಗಿದೆ, ಅಲ್ಲಿರತಕ್ಕ ಹೈಸ್ಕೂಲುಗಳ ಸಂಖ್ಯೆ ಎಲ್ಲಕ್ಕಿಂತ ಕಡಿಮೆ, ಆದ್ದರಿಂದ ರಾಯಚೂರಿಗೆ ಈ ರೂಲ್‌ನಿಂದ ಎಕ್ಸೆಂಪ್ಷನ್ ಬರುತ್ತದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಅಲ್ಲಿ ಯಾರಾದರೂ ಪ್ರೈವೇಟ್ ಸ್ಕೂಲ್ ಪ್ರಾರಂಭ ಮಾಡುತ್ತೇವೆ ಎಂದರೆ ಆ ಪ್ರದೇಶದಲ್ಲಿ ಪ್ರೈವೇಟ್ ಸ್ಕೂಲ್‌ನ ಅವಶ್ಯಕತೆ ಇದ್ದರೆ ಪರ್ಮಿಷನ್ ಕೊಡಲಾಗುತ್ತದೆ.

ಶ್ರೀ ಕೆ. ಎನ್. ವೀರಪ್ಪಗೌಡ. —ಹೊಸದಾಗಿ ಹೈಸ್ಕೂಲ್ ಪ್ರಾರಂಭ ಮಾಡುವಾಗ ಬಿಲ್ಡಿಂಗ್ ಮತ್ತು ಇತರ ಪ್ರಾಪರ್ಟಿ 5 ಸಾವಿರಕ್ಕಿಂತ ಜಾಸ್ತಿ, ಇದ್ದಾಗ ಕ್ಯಾಷ್ ಡಿಪಾಜಿಟ್ ಇಡಬೇಕೆಂದು ಕೇಳುವುದು ಸರಿಯೇ ?

ಶ್ರೀ ಕೆ. ವಿ. ಶಂಕರಗೌಡ. —ಇರತಕ್ಕ ಬಿಲ್ಡಿಂಗ್‌ಗೂ ಕ್ಯಾಷ್ ಡಿಪಾಜಿಟ್‌ಗೂ ಸಂಬಂಧವಿಲ್ಲ. ಕ್ಯಾಷ್ ಡಿಪಾಸಿಟ್ ಬೇರೆ ಕೆಲಸಗಳಿಗಾಗಿ ಇಡಬೇಕೆಂದು ಕೇಳುತ್ತೇವೆ.

ಶ್ರೀ ಪಿ. ವೆಂಕಟಗಿರಿಯಪ್ಪ —5 ಸಾವಿರ ರೂಪಾಯಿ ಡಿಪಾಸಿಟ್ ಇಡಬೇಕು ಮತ್ತು 3 ವರ್ಷಗಳವರೆಗೂ ಖಾಸಗಿ ಶಾಲೆಗಳಿಗೆ ಸಹಾಯದ್ರವ್ಯ ಕೊಡುವುದಿಲ್ಲ ಅಂತ ಅನ್ನುವುದರಿಂದ ಹಳ್ಳಿಗಾಡಿನಲ್ಲಿ ಹೈಸ್ಕೂಲುಗಳನ್ನು ಪ್ರಾರಂಭ ಮಾಡುವುದು ಬಹಳ ಕಷ್ಟವಾಗಿದೆ, ಇದನ್ನು ಎರಡು ವರ್ಷಕ್ಕೆ ಇಳಿಸುವುದನ್ನು ಯೋಚನೆ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—5 ಸಾವಿರ ರೂಪಾಯಿ ಕೊಡಬೇಕು ಅಂತ ಅನ್ನುವುದು 5 ಕಂತುಗಳಲ್ಲಿ ಕೊಡಬೇಕೆಂದು ಬದಲಾಯಿಸಿದ್ದೇವೆ. ಒಂದೇ ಕಂತಿನಲ್ಲಿ ಕೊಡಬೇಕಾಗಿಲ್ಲ. ಮತ್ತು ಈಗಾಗಲೇ ಗ್ರಾಮಾಂತರ ಪ್ರದೇಶಗಳಲ್ಲಿ ಬೇಕಾದಷ್ಟು ಹೈಸ್ಕೂಲುಗಳು ಇವೆ, ಎಲ್ಲಿ ಹೈಸ್ಕೂಲು ಇಲ್ಲದೇ ಜನರಿಗೆ ತೊಂದರೆಯಾಗಿದೆ ಅಲ್ಲಿ ಖಂಡಿತವಾಗಿಯೂ ಹೈಸ್ಕೂಲು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

Sri B. P. KADAM.—Sir, just now the Hon'ble Minister was pleased to say that there are schools whose student population is not even 60. Is it not a fit case to convert these schools into Colleges ?

Sri K. V. SHANKARA GOWDA.—That is a different matter altogether.

Sri V. N. PATIL.—May I know whether this attitude of the Government is not going to discourage the starting of high schools in backward areas ?

Sri K. V. SHANKARA GOWDA.—Sir, we are already having 2,000 high schools in backward areas. How can the Hon'ble member say that we are discouraging ?

ಶ್ರೀ ಎಸ್. ಎಸ್. ಅರಕೇರಿ.—ಹೈಸ್ಕೂಲುಗಳನ್ನು ತೆರೆಯುವುದು ಈಗ ಒಂದು ಫ್ಯಾಷನ್ ಆಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಕನ್ನಡ ನಾಡಿನ ಶಿಕ್ಷಣದ ಮಟ್ಟ ಎಷ್ಟರ ಮಟ್ಟಿಗೆ ಕೆಳಮಟ್ಟದಲ್ಲಿದೆ ಎನ್ನುವುದನ್ನು ನೋಡಿದರೆ ಇದು ಉಚಿತವಲ್ಲವೇ ?

ಶ್ರೀ ಕೆ. ವಿ. ಶಂಕರಗೌಡ.—ಹಾಗೇನೂ ಇಲ್ಲ, ಯಾರಿಗಾದರೂ ಕೆಲಸ ಇಲ್ಲದೇ ಇದ್ದರೆ ಕೆಲಸ ಕೊಡುವುದಕ್ಕೆ ಮತ್ತು ದುಡ್ಡು ಮಾಡುವುದಕ್ಕೆ ಕೆಲವರು ಹೈಸ್ಕೂಲು ತೆರೆಯುವುದು ಒಂದು ಪದ್ಧತಿಯಾಗಿದೆ.

ಶ್ರೀ ಕೆ. ಎಚ್. ಪಾಟೀಲ್.—ಕೆಲವು ಹೈಸ್ಕೂಲಿನವರು ಈಗಾಗಲೇ ಕೆಲವು ಬ್ಯಾಂಕುಗಳಲ್ಲಿ ಹಣವನ್ನು ಡಿಪಾಸಿಟ್ ಮಾಡಿರುತ್ತಾರೆ, ತಾವು ಪೆಡ್ಯೂರ್ ಬ್ಯಾಂಕಿನಲ್ಲಿ ಡಿಪಾಸಿಟ್ ಮಾಡಬೇಕು ಇಲ್ಲದೇ ಇದ್ದರೆ ಹೇ ಬಿಲ್ ಡಿಸಅಲ್ ಮಾಡುತ್ತೇವೆ ಎಂದು ಸರ್ಕ್ಯುಲರ್ ಕಳುಹಿಸಿದ್ದೀರಿ, ಇದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಕೆ. ವಿ. ಶಂಕರಗೌಡ.—ಇಂತಹ ಕಡೆ ಫಿಕ್ಸೆಡ್ ಡಿಪಾಸಿಟ್ ಹಣ ಇದೆ ಅಂತ ಹೇಳಿದರೆ ಅದಕ್ಕೆ ರಿಯಾಯಿತಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎ. ಆರ್. ಪಂಚಗಾವಿ.—ಈಗಾಗಲೇ ಕೆಲವು ಹೈಸ್ಕೂಲುಗಳಲ್ಲಿ 5 ವರ್ಷಕ್ಕಿಂತ ಮೇಲ್ಪಟ್ಟು ಫಿಕ್ಸೆಡ್ ಡಿಪಾಸಿಟ್ ಇಟ್ಟಿರುತ್ತಾರೆ, ಆ ಅವಧಿ ಮುಗಿಯುವವರೆಗೂ ಅದನ್ನು ಕನ್ವರ್ಸನ್ ಮಾಡುವುದಕ್ಕೆ ತೊಂದರೆ ಇದೆ, ಅಂತಹ ಸಂದರ್ಭದಲ್ಲಿ ಕನ್ಸೆಷನ್ ಕೊಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಕನ್ಸೆಷನ್ ಕೊಡುತ್ತೇವೆ, ಪರಿಶೀಲನೆ ಮಾಡುತ್ತೇವೆ ಎಂದು ಆಗಲೇ ಹೇಳಿದ್ದೇನೆ.

ಅಧ್ಯಕ್ಷರು.—ಪ್ರಶ್ನೋತ್ತರಗಳ ಕಾಲ ಮುಗಿಯಿತು.